**ಎರಡನೇ ಅಪರ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ**
**ಮದ್ದೂರು**
**ಸಿ.ಸಿ. 7765/2021**

**ಫಿರ್ಯಾದಿದಾರರು:- ಮದ್ದೂರು ಪೋಲಿಸ್ ಠಾಣೆ**

**ವಿರುದ್ಧ**

**ಆರೋಪಿ:- ನಾಗರಾಜು ಉ: ಹಂದಿ ನಾಗ**
**ಬಿನ್ ಲೇಟ್ ರಾಮೇಗೌಡ,**
**50 ವರ್ಷ, ಕೂಲಿ ಕೆಲಸ**
**ವಾಸ: ತೊಪ್ಪನಹಳ್ಳಿ ಗ್ರಾಮ, ಮದ್ದೂರು ತಾ:**

**-:ದೋಷಾರೋಪಣೆ:-**

ಶ್ರೀ. **ಕಿರಣ್ ಎಸ್.ಪಿ..,** ಬಿ.ಬಿ.ಎಂ., ಎಲ್.ಎಲ್.ಬಿ., 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು, ಮದ್ದೂರು ಆದ ನಾನು ಈ ಮೇಲ್ಕಂಡ ನಿಮ್ಮನ್ನು ಈ ಕೆಳಗಿನಂತೆ ದೋಷಾರೋಪಣೆಗೆ ಒಳಪಡಿಸುತ್ತಿದ್ದೇನೆ :

ದಿನಾಂಕ 09-09-2021 ರಂದು ಮಧಾಹ್ನ 12-15 ಗಂಟೆ ಸಮಯದಲ್ಲಿ ಮದ್ದೂರು ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಮದ್ದೂರು ಟೌನ್ ಲೀಲಾವತಿ ಬಡಾವಣೆ 1 ನೇ ಕ್ರಾಸ್ ನಲ್ಲಿ ಶಾಸಕರಾದ ತಮ್ಮಣ್ಣ ನವರ ಮನೆಯ ಹತ್ತಿರ ಆರೋಪಿಯಾದ ನೀನು ಸಾರ್ವಜನಿಕವಾಗಿ ಅವಾಚ್ಯ ಶಬ್ದಗಳಿಂದ ನಿನ್ನ ತಾಯಿನಕೆಯ್ಯ ಸೂಳೆ ಮಗನೆ ಎಂದು ಎಂಬಿತ್ಯಾದಿಯಾಗಿ ಬೈಯ್ಯುತಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 186 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ದೋಷಾರೋಪಿಸುತ್ತೇನೆ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾ ನೀನು, ಚಾಸಾ.1 ಮತ್ತು ಚಾಸಾ.2 ರವರು ತಿಳುವಳಿಕೆ ಹೇಳಿದರೂ ಆರೋಪಿಯಾದ ನೀನು ಚಾಸಾ.1 ಮತ್ತು ಚಾಸಾ.2 ರವರಿಗೆ ಸೂಳೆ ಮಗನೆ ನೀನು ಯಾವನೂ ನನ್ನನ್ನು ಕೇಳಲು ಎಂದು ಅವಾಚ್ಯ ಶಬ್ದಗಳಿಂದ ಬೈದು ಅವರಿಗೆ ಉದ್ದೇಶ ಪೂರ್ವಕವಾಗಿ ಅವಮಾನ ಮಾಡಿ, ಪ್ರಚೋದನೆ ಕೊಟ್ಟು ಹಾಗೂ ಆ ಪ್ರಚೋದನೆಯಿಂದ ಅವರು ಶಾಂತಿಭಂಗ ಮಾಡಬಹುದೆಂದು ಗೊತ್ತಾಗಿಯೂ ಸಹ ಪ್ರಚೋದಿಸಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ದೋಷಾರೋಪಿಸುತ್ತೇನೆ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀನು, ಚಾಸಾ.1 ರವರ ಎಡಗೈಯನ್ನು ನುಲಿದು, ಬಲಗೈ ಬೆರಳನ್ನು ಸಹ ನುಲಿದು ನೋವುಂಟು ಮಾಡಿದ್ದು ಹಾಗೂ ಚಾಸಾ.2 ರವರ ಕೈಯನ್ನು ನುಲಿದು ಅವರುಗಳಿಗೆ ಸರ್ಕಾರಿ ಕರ್ತವ್ಯ ನಿರ್ವಹಿಸದಂತೆ ಅಡ್ಡಿಪಡಿಸಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 353 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ದೋಷಾರೋಪಿಸುತ್ತೇನೆ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀನು ಚಾಸಾ.1 ಮತ್ತು ಚಾಸಾ.2 ರವರ ಮೇಲೆ ಹಲ್ಲೆ ಮಾಡಿ ಹಿಡಿದು ಎಳೆದಾಡಿ ಚಾಸಾ.1 ಮತ್ತು ಚಾಸಾ.2 ರವರನ್ನು ಕರ್ತವ್ಯವನ್ನು ನಿರ್ವಹಿಸದಂತೆ ಬೆದರಿಸಲು ಸ್ವ ಇಚ್ಛೆಯಿಂದ ಹೊಡೆದು ಹಲ್ಲೆ ಮಾಡಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 332 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ದೋಷಾರೋಪಿಸುತ್ತೇನೆ.

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀನು ಚಾಸಾ.1 ರವರನ್ನು ಹಿಡಿದು ಎಳೆದಾಡಿ ಕೈಯಿಂದ ಮೈಮೇಲೆ ಹೊಡೆದು ಅವರಿಗೆ ಸ್ವಇಚ್ಛೆಯಿಂದ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 323 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ದೋಷಾರೋಪಿಸುತ್ತೇನೆ.

ಪ್ರಶ್ನೆ 1: ಈ ಮೇಲೆ ಹೇಳಿ, ನಿಮಗೆ ವಿವರಿಸಲಾದ ಈ ದೋಷಾರೋಪಣೆ ಅರ್ಥವಾಯಿತಾ?

ಉತ್ತರಃ

ಪ್ರಶ್ನೆ 2 : ಈ ಮೇಲೆ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

(ಈ ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿಗೆ ಅವರಿಗೆ ತಿಳಿಯುವಂತಹ ಕನ್ನಡ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿ, ಅವರು ಕೊಟ್ಟಂತಹ ಉತ್ತರವನ್ನು ಅವರ ಭಾಷೆಯಲ್ಲಿಯೇ ಯಥವತ್ತಾಗಿ ನನ್ನ ಕೈ ಬರಹದಲ್ಲಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದೇನೆ.)

(ಶ್ರೀ ಕಿರಣ್ ಎಸ್.ಪಿ)

ದಿನಾಂಕಃ06-02-2023 2 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ ಮದ್ದೂರು.